| | |
|---|---|
| ಪ್ರಾಸಾ | 08 |
| ಚಾಸಾ | 03 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಸತ್ರ ಪ್ರಕರಣ ಸಂಖ್ಯೆ: 123/2023**

(1 ಮತ್ತು 2 ನೇ ಆರೋಪಿತರನ್ನು ವಿ.ಸಿ ಮುಖಾಂತರ ವಿಚಾರಣೆಗೆ ಹಾಜರುಪಡಿಸಲಾಗಿದೆ)

**ದಿನಾಂಕ: 02.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಗರಾಜ್ |
| ತಂದೆ ಹೆಸರು | : | ವೆಂಕಟೇಶಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಬೈರಗಾನಹಳ್ಳಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ಪ್ರಾಸಾ-1,3 ಹಾಗೂ ಚಾಸಾ-6 ಗೊತ್ತು. ಪ್ರಾಸಾ-7 ನನ್ನ ತಮ್ಮ. ಪ್ರಾಸಾ-4, ಚಾಸಾ-8 ಗೊತ್ತು. ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿತರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ 6 ನೇ ಆರೋಪಿ ಗೊತ್ತು. ನ್ಯಾಯಾಲಯದ ಮುಂದಿರುವ ಉಳಿದ ಆರೋಪಿತರು ನನಗೆ

| | |
|---|---|
| ಪ್ರಾಸಾ | 08 |
| ಚಾಸಾ | 03 |

ಗೊತ್ತಿಲ್ಲ.

**2.** ಮೃತ ನಾರಾಯಣಸ್ವಾಮಿ ನನ್ನ ಮಾವ. ನಾರಾಯಣಸ್ವಾಮಿರವರು ಹೇಗೆ ತೀರಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಸುಮಾರು ಒಂದು ವರ್ಷದ ಹಿಂದೆ ಸಂಜೆ ನಾನು, ಪ್ರಾಸಾ-7 ಹಾಗೂ ದೇವಪ್ಪ ಕೂಲಿ ಕೆಲಸದಿಂದ ವಾಪಸ್ಸಾಗುತ್ತಿದ್ದಾಗ ಸುರೇಶ್ ರವರ ತೋಟದ ಬಳಿ ನಾರಾಯಣಸ್ವಾಮಿರವರ ಕಾರು ನಿಂತಿತ್ತು. ನಂತರ ನಾವು ಊರಿಗೆ ಹೋದಾಗ, ನಾರಾಯಣಸ್ವಾಮಿರವರನ್ನು ಕೊಲೆ ಮಾಡಿದ್ದಾರೆಂದು ಮಾತನಾಡಿಕೊಳ್ಳುತ್ತಿದ್ದರು. ನಂತರ ಊರಿನವರೆಲ್ಲಾ ನಾರಾಯಣಸ್ವಾಮಿರವರು ಕೊಲೆಯಾಗಿದ್ದ ಸ್ಥಳಕ್ಕೆ ಹೋಗಿ ನೋಡಿದ್ದೆವು. ನಾರಾಯಣಸ್ವಾಮಿರವರನ್ನು ಯಾರೋ ಕೊಚ್ಚಿ ಕೊಲೆ ಮಾಡಿದ್ದರು. ನಾರಾಯಣಸ್ವಾಮಿರವರಿಗೆ ಹಲ್ಲೆ ಮಾಡಿರುವುದನ್ನು ನಾನು ನೋಡಿಲ್ಲ. ಸದರಿ ನಾರಾಯಣಸ್ವಾಮಿರವರನ್ನು ಕೊಲೆ ಮಾಡುವುದನ್ನು ನಾನು ನೋಡಿದ್ದೆನೆಂದು ಪೊಲೀಸರಿಗೆ ನಾನು ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

| | |
|---|---|
| ಪ್ರಾಸಾ | 08 |
| ಚಾಸಾ | 03 |

<u>ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-</u>

**3.** ದಿಃ 24.08.2023 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನಾನು, ಪ್ರಾಸಾ-7 ರವರು ನಮ್ಮ ಊರಿಗೆ ವಾಪಸ್ಸು ಬರುವ ಸಮಯದಲ್ಲಿ ದ್ಯಾವಪ್ಪನ ಗುಡಿಬಳಿ ಬಂದಾಗ, ನಮ್ಮ ಮಾವ ನಾರಾಯಣಸ್ವಾಮಿರವರು ತಮ್ಮ ಮಾರುತಿ ಓಮ್ನಿ ಕಾರನ್ನು ಸ್ಟ್ರಾಟ್ ಮಾಡಿ ಹೋದರು ಎಂದರೆ ಸರಿಯಲ್ಲ. ಸದರಿ ಕಾರನ್ನು 1 ಮತ್ತು 2 ನೇ ಆರೋಪಿತರು ದ್ವಿಚಕ್ರ ವಾಹನ ಸಂಃ ಕೆಎ-40-ವೈ-6721 ರಲ್ಲಿ ಹಿಂಬಾಲಿಸಿಕೊಂಡು ಹೋದರು ಎಂದರೆ ಸರಿಯಲ್ಲ. ಸಂಜೆ 7.30 ಗಂಟೆ ಸಮಯದಲ್ಲಿ ಸುರೇಶ್ ರವರ ಜಮೀನಿನ ಬಳಿ ನಮ್ಮ ಮಾವ ಕಾರಿನಲ್ಲಿ ಬಂದಾಗ ನಮ್ಮ ಮುಂಭಾಗದಲ್ಲಿ ಹೋಗುತ್ತಿದ್ದ ನಾರಾಯಣಸ್ವಾಮಿ ರವರ ಕಾರನ್ನು, ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಯಾರೋ ವ್ಯಕ್ತಿ ನಿಲ್ಲಿಸಿದರು ಎಂದರೆ ಸರಿಯಲ್ಲ. ಸದರಿ ದ್ವಿಚಕ್ರ ವಾಹನದಲ್ಲಿದ್ದ ವ್ಯಕ್ತಿ ನಮ್ಮ ಮಾವ ನಾರಾಯಣಸ್ವಾಮಿರವರ ಕಾರಿನ ಬಳಿ ಹೋದರು ಎಂದರೆ ಸರಿಯಲ್ಲ. ಆಗ ನಾವು ಸಹ ನಮ್ಮ ದ್ವಿಚಕ್ರ ವಾಹನವನ್ನು ಪಕ್ಕದಲ್ಲಿ ನಿಲ್ಲಿಸಿದೆವು ಎಂದರೆ ಸರಿಯಲ್ಲ. ಸದರಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ 1 ಮತ್ತು 2 ನೇ ಆರೋಪಿತರು ನಮ್ಮ ಮಾವನ ಸಮೀಪ ಹೋದ ಕೂಡಲೆ ನಮ್ಮ ಮಾವ ಕಿರುಚಾಡಿದರು ಎಂದರೆ

| | |
|---|---|
| ಪ್ರಾಸಾ | 08 |
| ಚಾಸಾ | 03 |

ಸರಿಯಲ್ಲ. ನಾವು ಬೈಕ್ ಸ್ಟಾರ್ಟ್ ಮಾಡಿ ಅಲ್ಲಿ ಹೋದಾಗ 1 ಮತ್ತು 2 ನೇ ಆರೋಪಿತರು ಕಬ್ಬಿಣದ ಮಚ್ಚು ಹಾಗೂ ಇತರೆ ಮಾರಕಾಸ್ತ್ರಗಳಿಂದ ನಮ್ಮ ಮಾವನಿಗೆ ಹಲ್ಲೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ಸ್ಥಳದಲ್ಲಿ ನ್ಯಾಯಾಲಯದ ಮುಂದಿರುವ 3 ನೇ ಆರೋಪಿಯು ಸಹ ಇದ್ದರು ಎಂದರೆ ಸರಿಯಲ್ಲ. ನಮ್ಮನ್ನು ನೋಡಿ 1 ರಿಂದ 3 ನೇ ಆರೋಪಿತರು ಸ್ಥಳದಿಂದ ದ್ವಿಚಕ್ರವಾಹನದಲ್ಲಿ ಪರಾರಿಯಾದರು ಎಂದರೆ ಸರಿಯಲ್ಲ.

**4.** ನಂತರ ನಾವು ನಮ್ಮ ದ್ವಿಚಕ್ರ ವಾಹನವನ್ನು ನಿಲ್ಲಿಸಿ ಮೊಬೈಲ್ ನಿಂದ ಟಾರ್ಚ್ ಹಾಕಿ ನೋಡಿದಾಗ ನಮ್ಮ ಮಾವ ನಾರಾಯಣಸ್ವಾಮಿರವರು ಕೊಲೆ ಆಗಿ ರಕ್ತದ ಮಡುವಿನಲ್ಲಿ ಬಿದಿದ್ದರು ಎಂದರೆ ಸರಿಯಲ್ಲ. ನಂತರ ನಾವು ಹೋಗಿ ಪ್ರಾಸಾ-3 ರವರಿಗೆ ವಿಚಾರವನ್ನು ತಿಳಿಸಿದೆವು ಎಂದರೆ ಸರಿಯಲ್ಲ.

**5.** 1 ನೇ ಆರೋಪಿಯು 6 ನೇ ಆರೋಪಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರೆಂದು, ಸದರಿ ವಿಚಾರವಾಗಿ 1 ನೇ ಆರೋಪಿಗೂ ಚಾಸಾ-8 ರವರಿಗೂ ಗಲಾಟೆಯಾಗಿ, ಈ ಬಗ್ಗೆ ನಮ್ಮ ಮಾವ ನಾರಾಯಣಸ್ವಾಮಿ ಪಂಚಾಯ್ತಿ ನಡೆಸಿ ಬುದ್ದಿ ಹೇಳಿದರು ಎಂದು, ಸದರಿ ವೈಷಮ್ಯದ ಹಿನ್ನಲೆಯಲ್ಲಿ 1 ರಿಂದ 5 ನೇ

| | |
|---|---|
| ಪ್ರಾಸಾ | 08 |
| ಚಾಸಾ | 03 |

ಆರೋಪಿತರು 6 ನೇ ಆರೋಪಿಯ ಕುಮ್ಮಕ್ಕಿನಿಂದ ನಾರಾಯಣಸ್ವಾಮಿರವರನ್ನು ಕೊಲೆ ಮಾಡಲು ಸಂಚು ರೂಪಿಸಿ, ದಿಃ 24.08.2023 ರಂದು ನಮ್ಮ ಮಾವ ಓಮ್ನಿ ಕಾರಿನಲ್ಲಿ ಬರುತ್ತಿದ್ದಾಗ 1 ರಿಂದ 3 ನೇ ಆರೋಪಿತರು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ, ಕೊಲೆ ಮಾಡಿದ್ದಾರೆಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ.

**6.** ದಿಃ 22.09.2023 ರಂದು ಪೊಲೀಸರಿಗೆ ಘಟನೆಯನ್ನು ನೋಡಿದ್ದೆನೆಂದು ಹೇಳಿಕೆ ನೀಡಿದ್ದೆನೆಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ " ಸಂಜೆ ಸುಮಾರು **7.00** ಗಂಟೆ ಸಮಯದಿಂದ **..............................** ವಿಚಾರ ತಿಳಿಯಿತು" ಎಂಬ ಭಾಗವನ್ನು ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿರುವುದರಿಂದ ಸದರಿ ಭಾಗವನ್ನು ನಿಪಿ **17** ಎಂದು ಗುರುತಿಸಲಾಯಿತು. ಸದರಿ ಘಟನೆಯನ್ನು ಪ್ರತ್ಯೇಕ್ಷವಾಗಿ ನೋಡಿ ನಿಪಿ **17** ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರೊಂದಿಗೆ ಶಾಮಿಲ್ ಆಗಿ, ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 08 |
| ಚಾಸಾ | 03 |

**<u>ಪಾಟೀ ಸವಾಲು: 1 ರಿಂದ 4ನೇ ಆರೋಪಿತರ ಪರ ಶ್ರೀಎಂ.ಜಿ.ಎಸ್.ಆರ್ ವಕೀಲರಿಂದ:</u>**

ಶ್ರೀ. ಎಂ.ಜಿ.ಎಸ್.ಆರ್ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲು: 5 ನೇ ಆರೋಪಿ ಪರ ಶ್ರೀ ಕೆ ಎಂ ಎಂ ವಕೀಲರಿಂದ:</u>**

ಕುಮಾರಿ ಇ.ವಿ. ವಕೀಲರು ಶ್ರೀ ಕೆ.ಎಂ.ಎಂ ವಕೀಲರ ಪರ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**<u>ಪಾಟೀ ಸವಾಲು: 6 ನೇ ಆರೋಪಿ ಪರ ಶ್ರೀಹೆಚ್ ಸಿ ಪಿ ವಕೀಲರಿಂದ:</u>**

ಶ್ರೀ. ಹೆಚ್.ಸಿ.ಪಿ. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರುವಿಚಾರಣೆ: ಇಲ್ಲ.</u>**

**(ದಿನಾಂಕ: 02.09.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಶಿವಪ್ರಸಾದ್.ಕೆ.ಬಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**